Sri D. B. KALMANKAR.—Not only there is no standard of education in these schools, but even the furniture is not provided. Has this come to the notice of the Government ?

Sri N. M. KOTRABASAIAH SOGI.—The present condition of the high schools is fairly satisfactory. If there is any particular instance where inconvenience is felt, and if it is brought to the notice of Government, proper action will be taken.

ಶ್ರೀ ಕೆ. ಎಚ್. ಶ್ರೀನಿವಾಸ.—11ನೇ ತರಗತಿಯನ್ನು ಪ್ರಾರಂಭ ಮಾಡಲು ನಮಗೆ ಗೊತ್ತಿರುವಂತೆ ವಿಶ್ವವಿದ್ಯಾಲಯದವರು ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿಗೆ ಕೊಟ್ಟಿದ್ದಾರೆ. ಈಗ ಕೊಠಾರಿ ಆಯೋಗದ ವರದಿ ಪ್ರಕಾರ ಮತ್ತು ನಮ್ಮ ರಾಜ್ಯದಲ್ಲಿರುವ ವಿಶ್ವವಿದ್ಯಾಲಯಗಳ ವೈಸ್‌ಛಾನ್ಸಲರುಗಳು ಎರಡು ವರ್ಷದ ಪಿ.ಯು.ಸಿ. ಇನ್‌ಟ್ರೊಡ್ಯೂಸ್ ಮಾಡಬೇಕೆಂದು ಈಗಾಗಲೇ ಅನಧಿಕೃತವಾಗಿ ತೀರ್ಮಾನ ಮಾಡಿರುವುದರಿಂದ 11ನೇ ತರಗತಿಯ ಭವಿಷ್ಯವೇನು ಎನ್ನುವ ಪ್ರಶ್ನೆ ಉದ್ಭವವಾಗುತ್ತದೆ. ಈ ಪ್ರಶ್ನೆಯಿಂದ ಅದು ಉದ್ಭವವಾಗದೆ ಇರಬಹುದು.....

Mr. SPEAKER.—Speech-making should be avoided during question-time.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಮಾನ್ಯ ಸದಸ್ಯರು ಕೇಳುವ ಪ್ರಶ್ನೆ ಈ ಪ್ರಶ್ನೆಯೊಳಗೆ ಉದ್ಭವವಾಗುವುದಿಲ್ಲ. ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ನೂಕ್ತ ಉತ್ತರವನ್ನು ಕೊಡ ರಾಗುತ್ತದೆ.

ಶ್ರೀ ಎಚ್. ಸಿದ್ದವೀರಪ್ಪ.—ಉಪ ಪ್ರಶ್ನೆಗಳು ಉದ್ಭವವಾಗುವುದಿಲ್ಲ ಎಂದು ಹೇಳತಕ್ಕ ಹಕ್ಕು ನಿಮಗೆ ಸೇರಿದೆಯೇ ಹೊರತು ಮಂತ್ರಿಗಳಿಗಾಗಲೀ ಇತರ ಯಾರಿಗೇ ಆಗಲೀ ಸೇರಿಲ್ಲ.

Mr. SPEAKER.—I think it is for the Chair to say whether it arises or not. If the Hon'ble Minister has no information, he may plead notice or he may say he has no information.

Sri H. SIDDAVEERAPPA.—If this procedure has to be followed, we have to look at them ; but we have to look at the Chair, Sir.

Mr. SPEAKER.—There need be no controversy. It is for the Chair to say whether a question or a supplementary is relevant or not. If the Minister has any information, he may furnish it. Otherwise, he may ask for notice.

Unauthorised cultivation of Land

132. Sri B. GANGANNA (Kallambella).—

Will the Minister for Revenue be pleased to state :—

the extent of land cultivated unauthori edly in Kallambella constituency (Details to be furnished in the following form) ;

(i) Serial Number
(ii) Name of the Hobly
(iii) Extent of land

(SRI B. GANGANNA)

(iv) Period

(v) Fine collected

(vi) Action taken to regularise

(vii) Nature of land :—

(*a*) Date reserve

(*b*) Gomal and Hulbane Kharab

(*c*) Pootkharab

(*d*) Government waste land ?

A.—SRI H. V. KOUJALGI (Minister for Revenue).—

Vide Annexure appended.

STATEMENT

Sl. No.	Name of Hobli	Extent of land	Period	Fine collected	Action taken to regularise	Nature of land (vii)			
						Date reserve	Gommal & Hul-banni Kharab	Poot-Kharab	Govern-ment waste land
(i)	(ii)	(iii)	(iv)	(v)	(vi)	(a)	(b)	(c)	(d)
		A. G,		Rs. P.		A. G.	A. G.	A. G.	A. G.
1	Chelur Hobli	54–14	1967–68	Nil	The question of regularisation or otherwise of the encroached land is under consideration of the Government.	Nil	18–02	3–07	33–05
2	Hagalavadi	44–12	1967–68	Nil		22–27	18–05	2–10	1–10
3	Kallambella	263–02	5 to 10 years	2,222–76		27–05	195–22	—	40–15
4	Bukkapatna	901–30	do	5,658–30		300–31	364–18	—	236–21
5	Kandikere	447–14	1965–66 to 1967–68	576–21		256–16	42–10	32–08	116–20
		1710–32		8,457–27		606–39	638–17	37–25	427–31

ಶ್ರೀ ಬಿ. ಗಂಗಣ್ಣ.—ಈ ಪಟ್ಟಿಯಲ್ಲಿ ಕೊಟ್ಟಿರುವ ಉತ್ತರ ನೋಡಿದರೆ ವಸೂಲು ಮಾಡಿದ ಹಣ ಬಹಳ ಕಡಿಮೆ ಎಂದು ಕಾಣುತ್ತದೆ. ಇದರ ಬಗ್ಗೆ ವಿಚಾರಿಸುತ್ತೀರಾ ?

† ಶ್ರೀ ಹೆಚ್. ವಿ. ಕೌಜಲಗಿ.—ಈ ಹಣವನ್ನು ವಸೂಲುಮಾಡುವ ಅಧಿಕಾರ ಅಲ್ಲಿನ ಅಧಿಕಾರಿಗಳಿಗೆ ಸೇರಿದ್ದು. ಆದ್ದರಿಂದ ಕಡಿಮೆ ವಸೂಲಾಗಿದೆಯೆಂದು ನಮಗೆ ಏನೂ ಅನಿಸುವುದಿಲ್ಲ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಕಳ್ಳಂಬೆಳ್ಳದಲ್ಲಿ ಅನ್‌ಅಥರೈಸ್ಡ್ ಆಗಿ ಜಮೀನು ವತ್ತುವರಿ ಮಾಡಿಕೊಂಡಿರುವವರಿಗೆ ದಂಡ ಹಾಕಿ ಮತ್ತೆ ಕೆಲವರಿಗೆ ಹಾಕಿಲ್ಲ ಕಾರಣ ಏನು ? ಇದರಲ್ಲಿ ಬೆಳ್ಳೂರು ಗ್ರಾಮದಲ್ಲಿ 54·18 ಪ್ರದೇಶವನ್ನು 11 ವರ್ಷದಿಂದಲೂ ವತ್ತುವರಿ ಮಾಡಿಕೊಂಡಿದ್ದಾರೆ. ಹೀಗೆ ಅನಧಿಕೃತವಾಗಿ ಸಾಗುವಳಿ ಮಾಡಿದ್ದರೆ ಕೆಲವರಿಗೆ ಮಾತ್ರ ದಂಡ ಹಾಕಿ ಮತ್ತೆ ಕೆಲವರಿಗೆ ದಂಡ ಹಾಕದೇ ಇರುವುದಕ್ಕೆ ಕಾರಣ ಏನು ?

ಶ್ರೀ ಹೆಚ್. ವಿ. ಕೌಜಲಗಿ.—ಸರ್ಕಾರದ ಕಾನೂನು ಪ್ರಕಾರ ಯಾರು ಅನಧಿಕೃತವಾಗಿ ಸಾಗುವಳಿ ಮಾಡಿದ್ದಾರೆ ಅವರಿಗೆ ಹಾಕಿದೆ. ಯಾರಿಗೆ ಹಾಕಿಲ್ಲವೋ ಅಂಥವರ ಹೆಸರುಗಳನ್ನು ತಿಳಿಸಿದರೆ ಅದರ ಬಗ್ಗೆ ವಿಚಾರ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ದೊಡ್ಡ ದೊಡ್ಡ ಜಮೀನ್ದಾರರುಗಳು ಅಲ್ಲಿನ ಅಧಿಕಾರಿಗಳಿಗೆ ಲಂಚ ಕೊಟ್ಟು ಹೆಚ್ಚುವರಿ ಜಮೀನುಗಳನ್ನು ವತ್ತುವರಿ ಮಾಡಿಕೊಂಡಿದ್ದಾರೆ. ನೀವು ಇಂತಹ ದೊಡ್ಡ ಜಮೀನ್ದಾರರುಗಳು ವತ್ತುವರಿ ಮಾಡಿಕೊಂಡಿರುವ ಜಮೀನುಗಳನ್ನು ಕಸಿದುಕೊಂಡು ನಿಮ್ಮವರ್ಗದವರಿಗೋ, ಹರಿಜನರಿಗೋ ಹಂಚುತ್ತೀರಾ ?

ಶ್ರೀ ಹೆಚ್. ವಿ. ಕೌಜಲಗಿ.—ಈ ಬಗ್ಗೆ ಈ ಹೌಸ್‌ನಲ್ಲಿ ಒಂದು ಮಸೂದೆ ಬರುತ್ತದೆ. ಆ ಮಸೂದೆಮೇಲೆ ಸದಸ್ಯರು ತಮ್ಮ ಅಭಿಪ್ರಾಯವನ್ನು ಹೇಳಬಹುದು.

ಶ್ರೀ ಬಿ. ದೊಡ್ಡಬೋರೇಗೌಡ.—ಪ್ರತಿ ಹೋಬಳಿಯಲ್ಲಿ ಜಮೀನನ್ನು ಒತ್ತುವರಿ ಮಾಡಿಕೊಂಡಿರುವವರು ಎಷ್ಟು ಜನ ಒತ್ತುವರಿ ಮಾಡಿಕೊಳ್ಳದೇ ಇರುವವರು ಎಷ್ಟು ಜನ ಎಂದು ತಿಳಿಸುತ್ತೀರಾ ?

ಶ್ರೀ ಹೆಚ್. ವಿ. ಕೌಜಲಗಿ.—ಈಗ ನನ್ನ ಮುಂದೆ ಡೀಟೇರ್ಸ್ ಇಲ್ಲ. ಆದರೆ ಯಾರಿಗೆ ಭೂಮಿ ಕೊಡಬೇಕು, ಯಾರಿಗೆ ಕೊಡಬಾರದು, ಯಾರಿಗೆ ರೆಗ್ಯುಲರೈಸ್ ಮಾಡಬೇಕು ಎನ್ನುವ ವಿಷಯ ಏನು ಇದೆ ಅದು ಕಾಯಿದೆ ಇಲ್ಲಿ ಪಾಸಾದ ನಂತರ ಹೇಳಬಹುದು.

ಶ್ರೀ ಎನ್. ಜಿ. ಹಾಲಪ್ಪ.—ಮೀಸಲು ಈಚಲು ವನದಲ್ಲಿ 606 ಎಕರೆ ಜಮೀನು ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ನೀವು ಇಲ್ಲಿ ತಿಳಿಸಿದ್ದೀರಿ. ಅದರಲ್ಲಿ ಜಮೀನು ಇದ್ದವರು ಎಷ್ಟು ಜನ ಜಮೀನು ಇಲ್ಲದೇ ಇದ್ದವರು ಎಷ್ಟು ಜನ ?

ಶ್ರೀ ಹೆಚ್. ವಿ. ಕೌಜಲಗಿ.—ಆ ಡಿಟೇರ್ಸ್ ನನ್ನಲ್ಲಿ ಇಲ್ಲ.

ಶ್ರೀ ಎಂ. ತಮ್ಮಯ್ಯ.—ಒತ್ತುವರಿ ಜಮೀನು ಮಾಡಿಕೊಂಡದ್ದನ್ನು ಕ್ರಮಗೊಳಿಸುತ್ತೇವೆಂದು ಹೇಳಿದ್ದೀರಿ. ಇದನ್ನು ಯಾವ ರೀತಿ, ಯಾವ ಆಧಾರದ ಮೇಲೆ ಎಂದು ಹೇಳಿಲ್ಲ. ಇನ್ನಾದರೂ ಅದಕ್ಕೆ ಒಂದು ಹೇಳಿಕೆ ಕೊಟ್ಟು ತಪ್ಪಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಹೆಚ್. ವಿ. ಕೌಜಲಗಿ.—ಸದ್ಯಕ್ಕೆ ಇನ್ನು ಬಂದು ಮಾಡುವುದಕ್ಕೆ ತಿಳಿಸುತ್ತೇವೆ. ಮುಂಚಿತವಾಗಿಯೂ ಮಾಡಿದ್ದಾರೆ. ಅದರ ಬಗ್ಗೆ ಒಂದು ಕಾಯಿದೆ ಬರುತ್ತದೆ. ಆಮೇಲೆ ವಿಚಾರ ಮಾಡುತ್ತೇವೆ.

ಶ್ರೀ ಹೆಚ್. ಎನ್. ನಂಜೇಗೌಡ.—ಈಗ ಚೇಳೂರು, ಹಾಗಲವಾಡಿ ಹೋಬಳಿಯಲ್ಲಿ 67-68 ರಲ್ಲಿ ಒತ್ತುವರಿ ಮಾಡಿದ್ದು ಎಂದು ಹೇಳಿದ್ದೀರಿ. ಅಂದರೆ ಹೋದ ತಿಂಗಳಲ್ಲೂ ಆಗಿರಬಹುದು. ಈಗ ಒತ್ತುವರಿ ಮಾಡಿಕೊಂಡಿರುವ ಜಮೀನನ್ನು ಕ್ರಮಗೊಳಿಸಬೇಕೇ ಅಥವಾ ಬಾರದೇ ಎಂಬುದನ್ನು ತಿಳಿದುಕೊಂಡೇ ಏನಾದರೂ ಒತ್ತುವರಿ ಮಾಡಿದ್ದಾರಾ ?

ಶ್ರೀ ಎಚ್. ವಿ. ಕೌಜಲಗಿ.—ಕೆಲವರು ಹಾಗೆ ಮಾಡಿದ್ದರೂ ಮಾಡಬಹುದು.